ದುಷ್ಟಶಕ್ತಿಗಳು. ಯಾಗಯಜ್ಞಗಳ ರಕ್ಷಣೆ ಎಂದರೆ ವೈದಿಕ ಧರ್ಮದ ರಕ್ಷಣೆ. ಮುಂದೆ ಅದೇ ಹಾನಿಕರವಾದಾಗ ಬುದ್ಧನು ಬಂದು, ಅದನ್ನು ನಾಶಮಾಡಿ ಹೊಸ ಧರ್ಮವನ್ನು ಸ್ಥಾಪಿಸಿದನು.

ಅವತಾರದ ಇನ್ನೊಂದು ಉದ್ದೇಶ ಧರ್ಮಸಂಸ್ಥಾಪನೆ. ಹಾಗೆಂದರೇನು? ಧರ್ಮಕ್ಕೆ ಒಂದು ಹೊಸ ತಳಹದಿಯನ್ನು ಒದಗಿಸಿ ಅದು ಸುಭದ್ರವಾಗಿ ನಿಲ್ಲುವಂತೆ ಮಾಡುವುದು. ಧರ್ಮವು ಕ್ರಮೇಣ ಅವನತಿಯನ್ನು ಹೊಂದುತ್ತದೆ. ಧರ್ಮವು ಹೇಗೆ ಅವನತಿಯನ್ನು ಹೊಂದುತ್ತದೆ? ಶ್ರೀಶಂಕರಾಚಾರ್ಯರು ಹೇಳುತ್ತಾರೆ: **ದುರ್ಬಲಾನ್ ಅಜಿತೇಂದ್ರಿಯಾನ್ ಪ್ರಾಪ್ಯ ನಷ್ಟಂ ಯೋಗಂ ।** "ದುರ್ಬಲರೂ ಇಂದ್ರಿಯನಿಗ್ರಹವಿಲ್ಲದವರೂ ಆದವರ ಪಾಲಿಗೆ ಸೇರಿಕೊಂಡು ಯೋಗವು (ಧರ್ಮವು) ನಾಶವಾಯಿತು" (*ಗೀತಾಭಾಷ್ಯ, ೪:೨*). ಇಂಥವರು ಧರ್ಮವನ್ನು ತಮ್ಮ ಸಂಪೂರ್ಣ ವಶವನ್ನಾಗಿ ಮಾಡಿಕೊಂಡು ಜನಸಾಮಾನ್ಯರ ಸರಳ ನಂಬಿಕೆಯನ್ನು ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ಇದನ್ನೇ 'ಪುರೋಹಿತಶಾಹಿ' ಎಂದು ಕರೆಯುವುದು. ಕ್ರಮೇಣ ಅಧಿಕಾರ, ಸಂಪತ್ತು ಇತ್ಯಾದಿಗಳು ಧರ್ಮದೊಡನೆ ಸೇರಿಕೊಂಡು ತ್ಯಾಗಮನೋಭಾವ ಹೊರಟು ಹೋಗಿ ಧರ್ಮವು ವ್ಯಾಪಾರೀಕರಣಗೊಳ್ಳುತ್ತದೆ, ಜನಸಾಮಾನ್ಯರ ಶೋಷಣೆಯ ಸಾಧನವಾಗುತ್ತದೆ. ಧರ್ಮವು ಆಧ್ಯಾತ್ಮಿಕತೆಯಿಂದ ವಿಮುಖಗೊಂಡು, ರಾಜಕೀಯದೊಡನೆ ಬೆರೆತು ಪೂರ್ಣವಾಗಿ ಲೌಕಿಕವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಧರ್ಮಕ್ಕೆ ಅವಶ್ಯವಾದ ಆಧ್ಯಾತ್ಮಿಕ ತಳಹದಿಯನ್ನು ಒದಗಿಸಿ ಅದನ್ನು ಪುನರುಜ್ಜೀವನಗೊಳಿಸುತ್ತಾರೆ, ಅವತಾರಪುರುಷರು. ಏನೂ ಅರಿಯದ ಮಕ್ಕಳು ಅಮೂಲ್ಯ ರತ್ನಗಳನ್ನು ಆಟವಾಡುವುದಕ್ಕೆ ಉಪಯೋಗಿಸಬಹುದು. ಅದನ್ನು ನೋಡಿದ ಹಿರಿಯರು ಆ ರತ್ನಗಳನ್ನು ಮಕ್ಕಳ ಕೈಯಿಂದ ರಕ್ಷಿಸಿ ಅವುಗಳನ್ನು ಜೋಪಾನವಾಗಿ ಕಾಪಾಡುತ್ತಾರೆ. ಹಾಗೆಯೇ ಸ್ವಾರ್ಥಿಗಳ ದುರ್ಬಳಕೆಗೆ ಒಳಗಾದ ಧರ್ಮವನ್ನು ಅವತಾರಪುರುಷರು ರಕ್ಷಿಸುತ್ತಾರೆ.

ಧರ್ಮಸಂಸ್ಥಾಪನೆಯನ್ನು ಎರಡು ಅರ್ಥದಲ್ಲಿ ವಿವರಿಸಬಹುದು. ಒಂದು **ಸಾಂಪ್ರದಾಯಿಕ ಧರ್ಮದ ರಕ್ಷಣೆ**. ವಿವಿಧ ಆಚರಣೆಗಳು, ಪೂಜೆ ಮುಂತಾದವುಗಳಿಂದ ಕೂಡಿದ ಸಾಂಪ್ರದಾಯಿಕ ಧರ್ಮವು ಜನಸಾಮಾನ್ಯರಲ್ಲಿ ಧಾರ್ಮಿಕ ಶ್ರದ್ಧೆಯನ್ನು ಉಳಿಸಿ ಬೆಳೆಸಿಕೊಂಡು ಬರಲು ಅವಶ್ಯಕ. ಜನಸಾಮಾನ್ಯರಿಗೂ ಒಂದು ಧಾರ್ಮಿಕ ಶ್ರದ್ಧೆ ಅತ್ಯವಶ್ಯಕ. ಧರ್ಮವನ್ನು ನಿಗ್ರಹಿಸಲು ಎಷ್ಟೇ ಪ್ರಯತ್ನಪಟ್ಟರೂ ಅದು ಒಂದಲ್ಲ ಒಂದು ರೂಪದಲ್ಲಿ ತಲೆಯೆತ್ತುತ್ತದೆ. ಜನರು ಧರ್ಮವನ್ನು ಬಿಟ್ಟಿರಲಾರರು. ಹುಸಿ ವಿಚಾರವಾದ, ವಿಕೃತ ವೈಜ್ಞಾನಿಕ ಮನೋಭಾವ, ಕೆಲವು ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತಗಳು ಧಾರ್ಮಿಕ ಶ್ರದ್ಧೆಗೆ ಮಾರಕವಾಗುತ್ತವೆ. ಹಾಗೂ ಇದರಿಂದ ಜನಸಾಮಾನ್ಯರು ಧಾರ್ಮಿಕ ಶ್ರದ್ಧೆಯನ್ನು ಕಳೆದುಕೊಳ್ಳುತ್ತಾರೆ. ಇದರ ಪರಿಣಾಮವಾಗಿ ಸಾಂಪ್ರದಾಯಿಕ ಧರ್ಮವು ಪೀಳಿಗೆಯಿಂದ ಪೀಳಿಗೆಗೆ ನಶಿಸುತ್ತಾ ಹೋಗುತ್ತದೆ. ಅನುಸರಿಸುವವರಿಲ್ಲದೆ ಕೇವಲ ಸಿದ್ಧಾಂತಗಳ ಮೇಲೆ ಧರ್ಮ ನಿಲ್ಲಲಾರದು. ಸಾಂಪ್ರದಾಯಿಕ ಧರ್ಮದ ಪುನಃಸ್ಥಾಪನೆಯೇ ಅವತಾರದ ಉದ್ದೇಶ. ಇದನ್ನು ತಮ್ಮ ವ್ಯಕ್ತಿತ್ವದ ಪ್ರಭಾವದೊಂದಿಗೆ, ಆ ಧರ್ಮವನ್ನು ಅನುಸರಿಸುವುದರ ಮೂಲಕ, ಅವತಾರಪುರುಷರು ಸಾಧಿಸುತ್ತಾರೆ.

ಇನ್ನೊಂದು ಅರ್ಥದಲ್ಲಿ ಇದು **ಆಂತರಿಕ ಧರ್ಮದ ರಕ್ಷಣೆ.** ಆಂತರಿಕ ಧರ್ಮವೆಂದರೆ ಆಂತರಿಕ ಆಧ್ಯಾತ್ಮಿಕ ಹಂಬಲದೊಂದಿಗೆ ಸತ್ಯಸಾಕ್ಷಾತ್ಕಾರಕ್ಕಾಗಿ ವ್ಯಕ್ತಿಯು ಕೈಗೊಳ್ಳುವ ವಿವಿಧ ಆಧ್ಯಾತ್ಮಿಕ ಸಾಧನೆಗಳು. ಈ ಧರ್ಮ ವ್ಯಕ್ತಿನಿಷ್ಠವಾದುದು. ತೀವ್ರ ಭೋಗಾಸಕ್ತಿ, ನಾಸ್ತಿಕತೆ, ಜಡವಾದ ಮುಂತಾದವುಗಳ ಮೂಲಕ ಭಗವತ್‌ಶ್ರದ್ಧೆ ಕಡಿಮೆಯಾಗಿ ಜನರು ಆಧ್ಯಾತ್ಮಿಕ ಸಾಧನೆಗಳಿಂದ ವಿಮುಖರಾಗುತ್ತಾರೆ. ಕೆಲವರಿಗೆ ಆಧ್ಯಾತ್ಮಿಕ ಹಂಬಲವಿದ್ದರೂ ಸ್ಫೂರ್ತಿ ಮತ್ತು ಸೂಕ್ತ ಮಾರ್ಗದರ್ಶನಗಳಿಲ್ಲದೆ ಅಸಹಾಯಕರಾಗುತ್ತಾರೆ. ಅವತಾರಪುರುಷರು ತಮ್ಮ ಅಪಾರ ಶಕ್ತಿಯ ಮೂಲಕವೂ, ಅಪೂರ್ವ ಸಾಧನೆ ಮತ್ತು ಅನುಭವಗಳ ಮೂಲಕವೂ ಅತ್ಯಂತ ಬೃಹತ್ತಾದ ಆಧ್ಯಾತ್ಮಿಕ ಅಲೆಯೊಂದನ್ನು ಎಬ್ಬಿಸಿ ಹಲವು ಕಾಲದವರೆಗೆ ಅಸಂಖ್ಯ ಆಧ್ಯಾತ್ಮಿಕ ಸಾಧಕರಿಗೆ, ಆಧ್ಯಾತ್ಮಿಕ ಸ್ಫೂರ್ತಿಯನ್ನೂ, ಮಾರ್ಗದರ್ಶನವನ್ನೂ ಒದಗಿಸುತ್ತಾರೆ. ಇದರ ಮೂಲಕ ಸಾಂಪ್ರದಾಯಿಕ ಧರ್ಮಕ್ಕೂ ಅವರು ಜೀವದಾನ ಮಾಡುತ್ತಾರೆ.

ಹೀಗೆ ಅವತಾರಪುರುಷರ ಆಗಮನ, ಅದರ ಉದ್ದೇಶ ಮತ್ತು ಅವರು ಸಾಧಿಸಿದ ಮಹತ್ಕಾರ್ಯಗಳನ್ನು ತಾತ್ತ್ವಿಕವಾಗಿ ಅರ್ಥಮಾಡಿಕೊಂಡು, ಶ್ರದ್ಧಾಭಕ್ತಿಗಳಿಂದ ಅವರನ್ನು ಆರಾಧಿಸಿದರೆ ಮುಕ್ತಿಯನ್ನು ಪಡೆಯಬಹುದೆಂದು ಶ್ರೀಕೃಷ್ಣನು ಭರವಸೆ ನೀಡುತ್ತಾನೆ. ಮಾನವನು ಭಗವಂತನನ್ನು ಈ ರೀತಿಯ ಮಾನವ ರೂಪದಲ್ಲಿ ಮಾತ್ರ ಆರಾಧಿಸಬಲ್ಲ. ಯಾವುದೋ ಬೇರೆ ರೂಪದ ಆರಾಧನೆಗಿಂತ ಇಂತಹ ದಿವ್ಯಪುರುಷರ ಆರಾಧನೆ ಅತ್ಯಂತ ಶ್ರೇಷ್ಠವಾದುದು.

### ಈ ತಿಂಗಳ ಮುಖಪುಟದ ಮಹತ್ವ

**ಇದು ಜೈಪುರ ಶೈಲಿಗೆ ಸೇರಿದ ಸಾಂಪ್ರದಾಯಿಕ ಚಿತ್ರವಾಗಿದೆ. ಭಾಗವತದಲ್ಲಿ ಬರುವ ಗಜೇಂದ್ರ ಮೋಕ್ಷದ ಕಥೆಯನ್ನು ಇದು ಬಿಂಬಿಸುತ್ತದೆ. ಜಾನ್ ಆಂತೋನಿ ಹಾಡ್ಗ್‌ಸನ್ ಎನ್ನುವವನು ೧೮೨೧ ರಿಂದ ೧೮೨೩ರವರೆಗೆ ಭಾರತದ ಸರ್ವೇಯರ್ ಜನರಲ್ ಆಗಿದ್ದನು. ಅವನು ಹಿಮಾಲಯವನ್ನು ಕ್ರಮಿಸಿದ ಮೊದಲ ಆಂಗ್ಲ ವ್ಯಕ್ತಿ. ಅವನು ದೆಹಲಿಯ ಮುಖ್ಯದ್ವಾರವೊಂದರಲ್ಲಿ ಈ ಸಾಂಪ್ರದಾಯಿಕ ಚಿತ್ರವನ್ನು ಕಂಡು, ಅದನ್ನು ತನ್ನ ಬಳಿ ಇಟ್ಟುಕೊಂಡಿದ್ದನು. ಇವನು ೧೮೪೮ರಲ್ಲಿ, ಭಾರತದಲ್ಲಿಯೇ ಮರಣಹೊಂದಿದನು.**

*(ಇಂಟರ್‌ನೆಟ್ ಮೂಲದಿಂದ)*

# ಶ್ರೀಕೃಷ್ಣಜನ್ಮಾಷ್ಟಮಿ

ಎಂ. ಅಬ್ದುಲ್ ನಬಿ

ಶ್ರೀಕೃಷ್ಣನ ದಿವ್ಯಜನ್ಮದ ವೃತ್ತಾಂತವನ್ನು ಸಾಂಕೇತಿಕವಾಗಿ ವಿವರಿಸಿರುವ ಲೇಖಕರು ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಕೆಲಸಮಾಡುತ್ತಿದ್ದಾರೆ. ಇವರು ಭರತನಾಟ್ಯ ತರಬೇತುಗಾರರು ಹಾಗೂ ಕರಾಟೆ ಶಿಕ್ಷಕರು ಕೂಡ ಹೌದು.

**ಅಷ್ಟಮ ಗರ್ಭ:** ಶ್ರೀಕೃಷ್ಣನು ಶ್ರಾವಣ ಮಾಸದ ಶುಕ್ಲ ಪಕ್ಷದ ಅಷ್ಟಮಿಯ ತಿಥಿಯಂದು ಜನಿಸಿದ ಕಾರಣ ಅವನ ಜನ್ಮದಿನವನ್ನು 'ಕೃಷ್ಣಜನ್ಮಾಷ್ಟಮಿ' ಎಂದು ಆಚರಿಸುತ್ತಾರೆ. ಶ್ರೀಕೃಷ್ಣನು ದೇವಕಿಗೆ ಅಷ್ಟಮಗರ್ಭಸಂಜಾತ. ದೇವಕಿಯ ಅಣ್ಣನಾದ ಕಂಸನು ಆಕೆಯನ್ನು ವಸುದೇವನಿಗೆ ಕೊಟ್ಟು ಮದುವೆ ಮಾಡಿ, ತನ್ನ ತಂಗಿಯ ಮೇಲಿನ ಪ್ರೀತಿಯಿಂದ, ತಾನೇ ರಥದ ಸಾರಥ್ಯವನ್ನು ವಹಿಸುತ್ತಾನೆ. ರಥವು ಮಾರ್ಗದಲ್ಲಿ ಸಾಗುತ್ತಿರುವಾಗ ಅಶರೀರವಾಣಿ ಹೀಗೆ ಮೊಳಗುತ್ತದೆ: "ಎಲೈ ಕಂಸನೇ, ನೀನು ಅತ್ಯಂತ ಮಮತೆಯಿಂದ ಕಾಣುವ ನಿನ್ನ ತಂಗಿ ದೇವಕಿಯ ಎಂಟನೆಯ ಗರ್ಭದಲ್ಲಿ ಹುಟ್ಟಿದ ಮಗುವಿನಿಂದ ನಿನ್ನ ಹತ್ಯೆಯಾಗುತ್ತದೆ." ಇದನ್ನು ಕೇಳಿ ಕೋಪಾವಿಷ್ಟನಾದ ಕಂಸನಿಗೆ ತಂಗಿಯಾದ ದೇವಕಿಯ ಮೇಲಿನ ಮಮತೆಯು ಕ್ಷಣಾರ್ಧದಲ್ಲಿ ಕರಗಿಹೋಯಿತು. ಅವಳನ್ನು ಕೊಲ್ಲಲು ಖಡ್ಗವನ್ನು ಎತ್ತಿದನು. ರಥದಿಂದ ಕೆಳಕ್ಕೆ ಎಳೆದು ವಧಿಸಲು ಮುಂದಾದನು.

"ಧರ್ಮ, ಅರ್ಥ, ಕಾಮ – ಇವುಗಳಲ್ಲಿ ನಿನ್ನ ಸಹವರ್ತಿಯಾಗುತ್ತೇನೆ" ಎಂದು ಅಗ್ನಿಸಾಕ್ಷಿಯಾಗಿ ವರಿಸಿದ ತನ್ನ ಪತ್ನಿಯನ್ನು ರಕ್ಷಿಸಿಕೊಳ್ಳುವುದು ಪತಿಯಾದ ತನ್ನ ಧರ್ಮವೆಂದು ಆ ಸಂದರ್ಭದಲ್ಲಿ ವಸುದೇವನು ನಿರ್ಧರಿಸಿದನು. ಕಂಸನಿಗೆ ಹೀಗೆ ಸಮಾಧಾನಮಾಡಿದನು: "ಮಹಾರಾಜ, ಜೀವಕ್ಕೆ ಹೆದರಿ ತನ್ನ ತಂಗಿಯನ್ನೇ ವಧಿಸಿದನೆಂಬ ಲೋಕನಿಂದೆಗೆ ಏಕೆ ತಾನೇ ನೀನು ಗುರಿಯಾಗುತ್ತೀಯೆ? ದೇವಕಿಯ ಎಂಟನೆಯ ಪುತ್ರನಿಂದ ತಾನೇ ನಿನ್ನ ಪ್ರಾಣಕ್ಕೆ ಆಪತ್ತು! ನಾನಾದರೋ, ಆಕೆಯ ಉದರದಲ್ಲಿ ಜನಿಸಿದ ಎಲ್ಲ ಮಕ್ಕಳನ್ನೂ ತಂದು ನಿನಗೆ ಒಪ್ಪಿಸುತ್ತೇನೆ." ಈ ಮೂಲಕ ವಸುದೇವನು ತನ್ನ ಪತ್ನಿಯನ್ನು ರಕ್ಷಿಸಿಕೊಂಡು ಪತಿಯ ಧರ್ಮವನ್ನು ಪಾಲಿಸಿದನು.

**ಕಂಸನ ಭಯ:** ತಾನು ಸಾಯುತ್ತೇನೆಂದು ಹೆದರಿ ದೇವಕಿ ವಸುದೇವರ ಮಕ್ಕಳನ್ನು ಕೊಲ್ಲುವ ನಿರ್ಧಾರಕ್ಕೆ ಕಂಸ ಬಂದದ್ದು ಏಕೆ? ಅದಕ್ಕೆ ಕಾರಣ ಆತ್ಮದ ಬಗ್ಗೆ ಅವನಿಗಿದ್ದ ಅಜ್ಞಾನ. ನಾವೆಲ್ಲರೂ ಆತ್ಮಸ್ವರೂಪರು. ಈ ಶರೀರವು ಒಂದು ವಸ್ತ್ರದ ಹಾಗೆ ಇರುತ್ತದೆ. ಅದು ನಾಶವಾದರೆ ಆತ್ಮವು ಮತ್ತೊಂದು ಜನ್ಮ ಪಡೆಯುತ್ತದೆ. ಈ ಪರಿಜ್ಞಾನ ಕಂಸನಿಗೆ ಇರಲಿಲ್ಲ. ಈ ಜಗತ್ತಿನಲ್ಲಿ, 'ಸಾವು' ಎಂಬ ಶಬ್ದ ಕಿವಿಗೆ ಬಿದ್ದರೆ ಸಾಕು, ಎಂಥ ಜಗಜಟ್ಟಿಯಾದರೂ ನಡುಗಿಹೋಗುತ್ತಾನೆ. ಇದೇ ರೀತಿ ಕಂಸನೂ ಸಹ, ಈ ಭೂಮಿಯ ಮೇಲೆ ಹುಟ್ಟಿದ ಪ್ರತಿ ಪ್ರಾಣಿಯೂ ಸಾಯಲೇಬೇಕೆಂಬ ಸತ್ಯವನ್ನು ಅರಿಯದೆಯೇ ಭಯಭೀತನಾಗಿದ್ದನು.



**ಸೆರೆಮನೆಯಲ್ಲಿ ಜನನ:** ಇನ್ನು ಕೃಷ್ಣ ಸೆರೆಮನೆಯಲ್ಲಿ ಜನಿಸಿದ ಅಂತರಾರ್ಥವೇನು? ಶರೀರವೇ ಜೀವಿಗೆ ತನ್ನ ಕರ್ಮಫಲಗಳನ್ನು ಅನುಭವಿಸಲು ಪ್ರಾಪ್ತಿಯಾದ ಸೆರೆಮನೆ. ಮಧ್ಯರಾತ್ರಿಯ ಸಮಯದಲ್ಲಿ ಕೃಷ್ಣನು ಸೆರೆಮನೆಯಲ್ಲಿ ಜನಿಸಿದನೆಂದರೆ, ಅಜ್ಞಾನದ ಅಂಧಕಾರದಲ್ಲಿ ಜ್ಞಾನದ ಉದಯವಾಯಿತು ಎಂದೇ ಅರ್ಥ.

**ಎಂಟರ ಮಹತ್ವ:** ಅಷ್ಟ ಎಂದರೆ ಎಂಟು. ಈ ಎಂಟರ ಸಂಖ್ಯೆಗೆ ವಿಶೇಷವಾದ ಅರ್ಥವಿದೆ. ಅಷ್ಟಾಂಗಯೋಗದಲ್ಲಿ ಕೊನೆಯ ಅವಸ್ಥೆಯೇ ಸಮಾಧಿ, ಕುಂಡಲಿಯ ಜಾಗೃತಿ. ಇದೇ ಅಷ್ಟಮಿ ತಿಥಿಯಂದು ಅಷ್ಟಮಗರ್ಭಸಂಜಾತನಾಗಿ ಕೃಷ್ಣನು ಜನಿಸಿದುದರ ರಹಸ್ಯ.

**ಕಾಲವನ್ನು ಮೆಟ್ಟಿದವನು:** ಜನ್ಮ ತಾಳಿದಂದಿನಿಂದಲೂ ಮನುಷ್ಯನು ಜೀವನವೆಂಬ ನದಿಯಲ್ಲಿ ಕಷ್ಟ–ಸುಖ, ರೋಗ–ರುಜಿನ, ಚಿಂತೆ – ಹೀಗೆ ಹಲವಾರು ಬಾಧೆಗಳಿಂದ ಮುಳುಗುತ್ತಾ ತೇಲುತ್ತಾ ಸಾಗುತ್ತಾನೆ. ಕಡೆಯಲ್ಲಿ, ಕಾಲ ಅವನನ್ನು ನುಂಗಿ ಹಾಕುತ್ತದೆ, ಅಂದರೆ ಸಾವು ಕಬಳಿಸುತ್ತದೆ. ವಸುದೇವನು ಕೃಷ್ಣನನ್ನು ತಲೆಯ ಮೇಲೆ ಹೊತ್ತು ಸಾಗುವಾಗ ಯಮುನೆ ದಾರಿ ಕೊಟ್ಟಳು. ಇದರರ್ಥ ಏನು? ಆತ್ಮಜ್ಞಾನವನ್ನು ಹೊಂದಿ ಯಾರು ಬಾಳನ್ನು ನಡೆಸುತ್ತಾರೋ, ಅವರನ್ನು ಕಾಲವೆಂಬ ಪ್ರವಾಹವು